# ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ.

ಸಿ.ಸಿ. 45/2016

ಪಿ. ಡಬ್ಲ್ಯು: 5

ಸಿ. ಡಬ್ಲ್ಯು: 5

| | | |
|---|---|---|
| ಸಾಕ್ಷಿದಾರರ ಹೆಸರು | : | ಜಗದೀಶ |
| ತಂದೆ/ಪತಿಯ ಹೆಸರು | : | ಬೆಣ್ಣೆ ಮಹದೇವ |
| ವಯಸ್ಸು | : | 30 |
| ವೃತ್ತಿ | : | ವ್ಯವಸಾಯ |
| ವಾಸ | : | ನೇರಲೇಕೆರೆ |

ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕ 12-03-2018

ಮುಖ್ಯ ವಿಚಾರಣೆ: ಮಾನ್ಯ ಎ ಪಿ ಪಿ ರವರಿಂದ

ಪಿಡಬ್ಲ್ಯೂ 2 ಮತ್ತು ಚಾಸಾ 6 ನನಗೆ ಗೊತ್ತಿಲ್ಲ. ಸಾಕ್ಷಿಗೆ ನಿಪಿ 2 ತೋರಿಸಲಾಗಿದ್ದು ಸಾಕ್ಷಿ ನಿಪಿ 2 ರಲ್ಲಿ ತನ್ನ ಸಹಿ ಗುರ್ತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ 2-ಬಿ ಎಂದು ಗುರ್ತಿಸಲಾಯಿತು. ನಿಪಿ 2 ಕ್ಕೆ ಎರಡು ವರ್ಷದ ಹಿಂದೆ 1 ನೇ ಆರೋಪಿ ಮನ ಮುಂದೆ ಪೋಲೀಸರು ಬೆಳಗಿನ ಜಾವ ಸಹಿ ಮಾಡಲು ಕೇಳಿಕೊಂಡಾಗ ಸಹಿ ಮಾಡಿರುತ್ತೇನೆ. ನನ್ನ ಜೊತೆ ಸಹಿ ಮಾಡುವಾಗ ಕೆಂಪರಾಜು ಎನ್ನುವವರು ಸಹಾ ಇದ್ದರು . ನಾವಿಬ್ಬರೂ ಬಿಟ್ಟು ಬೇರೆ ಯಾರು ಇರಲಿಲ್ಲ ಎಂದರೆ ಇರಲಿಲ್ಲ . ಪೋಲೀಸರು ಸ್ಥಳಕ್ಕೆ ಬಂದಿದ್ದರು ಅಂತ ಹೇಳಿ ನಮ್ಮ ಸಹಿ ಪಡೆದಿರುತ್ತಾರೆ. ನಿಪಿ 2 ರಲ್ಲಿ ಏನು ಬರೆದುಕೊಂಡಿದ್ದಾರೆ ನಮಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ ಹಾಗೂ ನಾನು ಗಮನಿಸಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿ ಯವರು ಸಾಕ್ಷಿಯನ್ನು ಬಾಗಶಃ ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಕೋರಿರುತ್ತಾರೆ )

## ಪಾಟೀಸವಾಲು: ಶ್ರೀ ಎ ಪಿಪಿ ರವರಿಂದ

ನೀವು ಸಹಿ ಮಾಡುವಾಗ ಸುವರ್ಣ ಅಂದರೆ ಪಿಡಬ್ಲ್ಯೂ 2 ಸಹಾ ಇದ್ದರಾ ಎಂದರೆ ಸಾಕ್ಷಿ ಮರೆತು ಹೋಗಿದೆ ಎಂದು ಹೇಳುತ್ತಾರೆ. ಸುವರ್ಣರವರು ಇದೇ ಗಲಾಟೆ ಆದ ಸ್ಥಳ ಅಂತ ಅರಕೆರೆ ಪೋಲೀಸನವರಿಗೆ ಸ್ಥಳ ತೋರಿಸಿದರು ಎಂದರೆ ಸರಿಯಲ್ಲ. ಈ ವಿಚಾರವಾಗಿ ಆ ದಿನದ ಘಟನೆ ನನಗೆ ಈಗ ನೆನಪಿಲ್ಲ. ಪಿಡಬ್ಲ್ಯೂ 2 ರವರು ನನ್ನ ತಾಯಿಗೆ ಇದೇ ಕಲ್ಲಿನಿಂದ ಹೊಡೆದರು ಅಂತ ಒಂದು ಕಲ್ಲನ್ನು ಹಾಜರು ಪಡಿಸಿ , ಆ ಕಲ್ಲು ನಮ್ಮ ಮುಂದೆ ಮುಂದಿನ ಕ್ರಮಕ್ಕಾಗಿ ಅಮಾನತ್ತು ಪಡಿಸಿಕೊಂಡರು ಎಂದರೆ ನೆನಪಿಲ್ಲ. ನಂತರ ನಿಪಿ 2 ರಂತೆ ಬರೆದುಕೊಂಡಿರುವ ಮಹಜರನ್ನು ಓದಿ , ಹೇಳಿ, ತಿಳಿಸಿ ನಮ್ಮ ಸಹಿ ಪಡೆದಿರುತ್ತಾರೆ ಎಂದರೆ ನೆನಪಿಲ್ಲ.

<u>ಪಾಟೀ ಸವಾಲು ಶ್ರೀ ಆರೋಪಿ ಪರ ವಕೀಲರಿಂದ</u>

ಪೋಲೀಸನವರು ಸಹಿ ಮಾಡಿ ಅಂತ ಕೇಳಿಕೊಂಡಿದ್ದಕ್ಕೆ ಸಹಿ ಮಾಡಿರುತ್ತೀರಾ ಅದರಲ್ಲಿ ಇರುವ ವಿಚಾರ ಗೊತ್ತಿಲ್ಲ ಎಂದರೆ ಹೌದು. ಸಾಕ್ಷಿ ಹೇಳುವುದೇನೆಂದರೆ ಪೋಲೀಸರು ಅಲ್ಲಿ ಬಂದಿದ್ದರು ಸಹಿ ಮಾಡಿ ಅಂತ ಕೇಳಿಕೊಂಡಿದ್ದಕ್ಕೆ ಸಹಿ ಮಾಡಿದ್ದೇನೆ.

ಮರು ವಿಚಾರಣೆ ಇಲ್ಲ .

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ.,
ಶ್ರೀರಂಗಪಟ್ಟಣ.